## ಕನ್ನಡ ಮೇಷ್ಟ್ರು

ಕನಕಪುರ ನಾರಾಯಣ್, ಮೈಸೂರಿನಲ್ಲಿ ಮೆಕಾನಿಕಲ್ ಎಂಜಿನಿಯರ್ ಆಗಿದ್ದವರು, ಈಗ ಆಸ್ಟ್ರೇಲಿಯಾದಲ್ಲಿ ಸಾಫ್ಟ್‌ವೇರ್ ತಂತ್ರಜ್ಞರು. ಸಿಡ್ನಿಯಲ್ಲಿ 25 ವರ್ಷದಿಂದ ನೆಲೆಸಿದ್ದು ಅಲ್ಲಿ ಕನ್ನಡ ಪರಿಸರವನ್ನು ಕಟ್ಟುತ್ತಿದ್ದಾರೆ. ಪ್ರಸ್ತುತ ಅಲ್ಲಿನ 'ಪೆಂಡಿಗೊ' ಬ್ಯಾಂಕಿಗೆ ಐಟಿ ಸಪೋರ್ಟ್ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿದ್ದಾಗ ನಾಟಕಗಳನ್ನು ಬರೆಯುತ್ತಿದ್ದ ಅವರು ಈಗ ಕನ್ನಡ ಶಿಕ್ಷಕರಾಗಿ ಬ್ಲಾಗ್ ಬರಹದಲ್ಲಿ ತೊಡಗಿದ್ದಾರೆ. 'ಅಕ್ಕ ಹೇಳಿದ ಕಥೆಗಳು' ಶೀರ್ಷಿಕೆಯಲ್ಲಿ ಮಕ್ಕಳಿಗಾಗಿ 120 ಕಥೆಗಳನ್ನು ಬರೆದಿದ್ದಾರೆ. ಹಾಸ್ಯ ಮತ್ತು ಆಧ್ಯಾತ್ಮದ ಬಗ್ಗೆ ಅವರಿಗೆ ಒಂದು ಹಿಡಿ ಜಾಸ್ತಿ ಪ್ರೀತಿ.



ಸಿಡ್ನಿ ಕನ್ನಡ ಶಾಲೆಯಲ್ಲಿ ಕರ್ನಾಟಕದ ಪರಿಚಯ



ವಾರಾಂತ್ಯ ಕನ್ನಡ ಶಾಲೆಯಲ್ಲಿ ಮನೋಲ್ಲಾಸ

ಪೋಷಕರೊಬ್ಬರು ಇರುತ್ತಾರೆ. ಮೂಲ ಆಸ್ಟ್ರೇಲಿಯಾದವರಿಗೆ ನಾವು ಕನ್ನಡವನ್ನೇನು ಕಲಿಸುತ್ತಿಲ್ಲ. ಕನ್ನಡ ಮೂಲದವರೇ ಅನ್ಯ ರಾಜ್ಯದಲ್ಲಿ ಓದಿ ಸಿಡ್ನಿಯಲ್ಲಿ ನೆಲೆಸಿರುತ್ತಾರೆ. ಅವರನ್ನು ಬಿಟ್ಟರೆ ತೆಲುಗು–ತಮಿಳಿನ ಕೆಲ ಪೋಷಕರೂ ಕನ್ನಡ ಶಾಲೆಗೆ ತಮ್ಮ ಮಕ್ಕಳನ್ನು ಕಳಿಸುತ್ತಾರೆ. ಆಸ್ಟ್ರೇಲಿಯಾದಲ್ಲಿ ಮೆಡಿಕಲ್ ಕೋರ್ಸ್‌ಗೆ ಸೀಟು ಸಿಗದವರು ಕರ್ನಾಟಕದ ಮಣಿಪಾಲ್‌ನಲ್ಲಿ ಮೆಡಿಕಲ್ ಓದಿರುತ್ತಾರೆ. ಕೊನೆಯ ವರ್ಷ ಹೌಸ್ ಸರ್ಜನ್ ತರಬೇತಿ ಸಂದರ್ಭದಲ್ಲಿ ಅವರಿಗೆ ಕನ್ನಡದ ಅಗತ್ಯ ಇರುತ್ತದೆ. ಅಂತಹ ನಾಲ್ಕಾರು ಮಂದಿಗೆ ಮಾತನಾಡುವುದನ್ನು ಕಲಿಸಿದ್ದೇವೆ. ಅವರಿಗೆ ಮೂರು ತಿಂಗಳ ಕೋರ್ಸ್ ಇರುತ್ತದೆ. ವೈದ್ಯಕೀಯ ಪರಿಭಾಷೆಯೂ ಸೇರಿ ಮೂನ್ನೂರು ವಾಕ್ಯಗಳನ್ನು ಕಲಿಸಿದರೆ ರೋಗಿಯ ಜೊತೆ ಕನ್ನಡದಲ್ಲಿ ಮಾತನಾಡಿ ಅವರ ವೇದನೆಯನ್ನು ಅರಿಯುವ ಮಟ್ಟಿಗೆ ಸಿದ್ಧವಾಗುತ್ತಾರೆ.

◆ **ಆಸ್ಟ್ರೇಲಿಯಾದಲ್ಲಿ ಕನ್ನಡ ಶಾಲೆ ಎನ್ನುವ ಸುದ್ದಿ ಬಂತಲ್ಲ, ಅದು ನಿಜವೇ?**

ಅದು ಸುಲಭ ಸಾಧ್ಯವೇ? ಫ್ರಾನ್ಸ್‌ನ ಒಬ್ಬ ಭಾರತೀಯ ಅಳಿಯ ಕನ್ನಡವನ್ನು ಕಲಿತ ನಿದರ್ಶನ ಇದೆ. ಬಿಹಾರದ ಇಬ್ಬರು, ಶ್ರೀಲಂಕಾದ ಒಬ್ಬಳು ಕನ್ನಡ ಕಲಿತಿದ್ದಾರೆ. ಅಂದಹಾಗೆ, ಯುರೋಪಿಯನ್ನರು ಕನ್ನಡ ಶಾಲೆಗೇಕೆ ಬರುತ್ತಾರೆ? ವಾರಾಂತ್ಯದ ಕನ್ನಡ ಶಾಲೆಯನ್ನೇ ತಪ್ಪಾಗಿ ವರದಿ ಮಾಡಿರುವ ಸಾಧ್ಯತೆ ಇದೆ. ಅದಕ್ಕೆ ತಪ್ಪು ಮಾಹಿತಿ ಕೂಡ ರವಾನೆ ಆಗಿರಬಹುದು. ಕನ್ನಡವನ್ನು ಸಾರ್ವತ್ರಿಕವಾಗಿ ಕಲಿಸುವುದು ಸಾಧ್ಯವೇ? ಅಷ್ಟಕ್ಕೂ ಆಸ್ಟ್ರೇಲಿಯಾ ಸರ್ಕಾರಕ್ಕೆ ಅದು ಅಗತ್ಯವೇ? ಸಿಡ್ನಿಯಲ್ಲಿ 25 ವರ್ಷಗಳಿಂದ ಕನ್ನಡವನ್ನು ಕನ್ನಡದ ಮಕ್ಕಳಿಗಾಗಿ ನಾವು ಕಲಿಸುತ್ತಿದ್ದೇವೆ. ಸಿಡ್ನಿಗೆ ಭೇಟಿ ನೀಡುವ ಕನ್ನಡಿಗರು ನಮ್ಮ ಶಾಲೆಗಳಿಗೂ ಭೇಟಿ ನೀಡುತ್ತಾರೆ. ಕವಿ ಎಲ್. ಹನುಮಂತಯ್ಯ ಅವರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾಗ ಬಂದಿದ್ದರು. ನಮ್ಮ ಪಠ್ಯ ಚಟುವಟಿಕೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಒಂದು ಲಕ್ಷ ನಗದು ಪುರಸ್ಕಾರ, ಸಾಕಷ್ಟು ಪುಸ್ತಕಗಳನ್ನು ನೀಡಿ ಗೌರವಿಸಿದ್ದರು.

◆ **ಕನ್ನಡ ಸಂಸ್ಕೃತಿಗೆ ಸಂಬಂಧಿಸಿದಂತೆ ಮತ್ತೇನನ್ನು ಮಾಡುತ್ತೀರಿ?**

ಸಂಗೀತ–ನಾಟಕ ಅಭ್ಯಾಸವನ್ನು ಮಾಡಿಸುತ್ತೇವೆ. ಪ್ರತಿ ತಿಂಗಳು ಕನ್ನಡ ಸಂಸ್ಕೃತಿಗೆ ಸಂಬಂಧಿಸಿದಂತೆ ಒಂದು ಕಾರ್ಯಕ್ರಮ ಇದ್ದೇ ಇರುತ್ತದೆ. ವರ್ಷದಲ್ಲೊಂದು ದೊಡ್ಡ ಕಾರ್ಯಕ್ರಮವನ್ನು ಮಾಡುತ್ತೇವೆ. ನಮ್ಮ ವಾರಾಂತ್ಯದ ತರಗತಿಯಲ್ಲಿಯೂ ವಾದ್ಯ ಪರಿಕರವನ್ನು ಪರಿಚಯಿಸುತ್ತೇವೆ. ಸಿನಿಮಾ ಪ್ರದರ್ಶನ ಮಾಡುತ್ತೇವೆ. ಸಮಯದ ಮಹತ್ವನ್ನು ತಿಳಿಸುವ 'ಒನ್ ಮಿನಿಟ್' ನಮ್ಮ ಮಕ್ಕಳಿಗೆ ತುಂಬ ಪ್ರಯೋಜನಕಾರಿ. ಅಂದರೆ ಒಂದು ನಿಮಿಷ ಗಡಿಯಾರ ಸುತ್ತುವುದನ್ನು ಕೆಲವರು ವೀಕ್ಷಿಸಬೇಕು. ಮತ್ತೆ ಕೆಲವರು ಬಿಡುವು ಇಲ್ಲದಂತೆ ಗೆರೆಯನ್ನು ಎಳೆಯುತ್ತಾ ಹೋಗಬೇಕು. ಗಡಿಯಾರವನ್ನು ದಿಟ್ಟಿಸಿ ನೋಡುವವರಿಗೆ ಎಷ್ಟೋ ಹೊತ್ತು ಅನ್ನಿಸುತ್ತದೆ. ಅಷ್ಟರಲ್ಲಿ ಗೆರೆ ಎಳೆಯುವವ ನೂರಾರು ಗೆರೆ ಎಳೆದಿರುತ್ತಾನೆ. ಒಂದು ನಿಮಿಷದಲ್ಲಿ ಎಷ್ಟೆಲ್ಲಾ ಮಾಡಬಹುದು ಎನ್ನುವ ನಿದರ್ಶನ ಸಹಿತ ವಿವರಿಸುತ್ತೇವೆ. ಒಂದು ನಿಮಿಷವೂ ವ್ಯರ್ಥ ಮಾಡಬಾರದು, ದಿನದಲ್ಲಿ ಎಷ್ಟು ಸಮಯ ವ್ಯರ್ಥ ಮಾಡುತ್ತಿದ್ದೇವೆ ಎನ್ನುವುದನ್ನು ತೋರಿಸುತ್ತೇವೆ. ಇದನ್ನು ನಾನು ಜಪಾನಿನ ಸಂಸ್ಥೆಗೆ ಕೆಲಸ ಮಾಡುವಾಗ ಕಲಿತಿದ್ದೆ. **chakkemoggu.wordpress.com** (ಚಕ್ಕೆ ಮಗ್ಗು ) ಬ್ಲಾಗ್ ಬರೀತಾ ಇದ್ದೆ. **sugamakannada.com** ನಲ್ಲಿ ಬೇರೆ ಬೇರೆ ಬರಹಗಳನ್ನು ಪ್ರಕಟಿಸುತ್ತಿದ್ದೇವೆ. 'ಹೊರನಾಡ ಚಿಲುಮೆ' ಎನ್ನುವ ಮಾಸ ಪತ್ರಿಕೆಯನ್ನೂ ನಡೆಸುತ್ತಿದ್ದೇವೆ. ಇದಕ್ಕೆ ಯಾರಾದರೂ ಬರೆಯಬಹುದು. ಇದು 27 ದೇಶಗಳಲ್ಲಿ ಪ್ರಸರಣ ಹೊಂದಿದೆ. ■